ಕೆ.ಸಿ.ಡಿ.
# ಸಮಾಚಾರ
ಬದುಕಿನ ಹಾದಿಯಲ್ಲಿ ಬರವಣಿಗೆಯ ತೋರಣ

ಶಿಕ್ಷಣ-ಸಂಸ್ಕೃತಿ-ಸಮಾಜ
ನಮ್ಮ ಧ್ಯೇಯ, ನಿಷ್ಠೆ

KCD JOURNALISM CLUB DHARWAD

ಅಂತರ್ ಮಹಾವಿದ್ಯಾಲಯ ಯುವಜನೋತ್ಸವ 2016-17

ದಿನಾಂಕ : 07-11-2016, ಸೋಮವಾರ | ಕರ್ನಾಟಕ ಕಾಲೇಜು ಧಾರವಾಡ : ಬಿ. ಎ. ಪತ್ರಿಕೋದ್ಯಮ ವಿದ್ಯಾರ್ಥಿಗಳ ವಾರ ಪತ್ರಿಕೆ | ವಿಶೇಷ ಸಂಚಿಕೆ : 3

## ಸಾಮಾಜಿಕ ಸಮಸ್ಯೆಗಳನ್ನು ಬಿಂಬಿಸುವ ಏಕ ಪಾತ್ರಾಭಿನಯ

ಹುಣಸೂರಿನ ಜಮಿನ್ದಾರನು ಪುಕ್ಕಟೆ ಭೂಮಿಗೆ ಆಸೆ ಬಿದ್ದು ತನ್ನ ಪ್ರಾಣವನ್ನೇ ಕಳೆದುಕೂಂಡ ದುರ್ಘಟನೆಯು ನಡೆಯುತ್ತದೆ ಈ ಒಂದು ವಿಭಿನ್ನ ರೀತಿಯ ಪ್ರಯೋಗವನ್ನು ಈ ಯುವಜನೋತ್ಸವದಲ್ಲಿ ಏಕ ಪಾತ್ರ ಅಭಿನಯ ಮೂಲಕ ವಿದ್ಯಾರ್ಥಿಗಳು ಸೂಕ್ತ ರೀತಿಯಾಗಿ ಅದೇ  ಒಬ್ಬ ವ್ಯಕ್ತಿ ಸಮಾಜದಲ್ಲಿ ಕೆಟ್ಟ ಕೆಲಸದಿಂದ ಸಮಾಜದಲ್ಲಿ ಯಾವ ರೀತಿಯಾಗಿ ಅವನನ್ನು ಕಾಣುತ್ತದೆ ಎಂಬ ಪ್ರಯೋಗವನ್ನು ಸ್ಪರ್ಧಾಳುಗಳು ಮಾರ್ಮಿಕವಾಗಿ ಅಭಿನಯಿಸಿದರು. 2016–17 ಸಾಲಿನ ಪ್ರಥಮ ವಲಯದ ಯುವಜನೋತ್ಸವವು ಕರ್ನಾಟಕ ಕಲಾ ಮಹಾವಿದ್ಯಾಲಯದಲ್ಲಿ ನಡೆಯುತ್ತಿರುವ ಈ ಯುವಜನೋತ್ಸವದಲ್ಲಿ ಏಕ ಪಾತ್ರಾಭಿನಯದ ಸ್ಪರ್ಧೆಯು ಕರ್ನಾಟಕ ಕಲಾ ಮಹಾವಿದ್ಯಾಲಯದ ಮ್ಯಾನೇಜಮೆಂಟ್ ಸಭಾಂಗಣದಲ್ಲಿ ಜರುಗಿತು. ಈ ಸ್ಪರ್ಧೆಯಲ್ಲಿ ವಿವಿಧ ಕಾಲೇಜಿನ ವಿದ್ಯಾರ್ಥಿಗಳು ರೈತನ ದುರಾಸೆಯು ಯಾವ ಮಟ್ಟಕ್ಕೆ ತಂದು ನಿಲ್ಲುಸುತ್ತದೆ ಎಂದು ಬಹಳ ಮನಮುಟ್ಟುವಂತೆ ವಿದ್ಯಾರ್ಥಿಗಳು ತಮ್ಮ ನಟನಾ ಪ್ರತಿಭೆಯನ್ನು ಪ್ರದರ್ಶಿಸಿದರು. ಈ ಸ್ಪರ್ಧೆಯ ನಿರ್ಣಾಯಕರಾಗಿ ಡಾ.ಶಶಿಧರ, ನರೇಂದ್ರ, ಶ್ರಿಮತಿ ಗರುಡಾ, ವಿಜೇಂದ್ರ. ಅರ್ಚಕ ಆಗಮಿಸಿದ್ದರು.

**ಪೂಜಾ.ಬಿ.ರವಿನಾಯಕ**
**ಬಿ.ಎ. ಪ್ರಥಮ ವರ್ಷ**






## ರಸಪ್ರಶ್ನೆ ಸ್ಪರ್ಧೆ

ಕರ್ನಾಟಕ ವಿಶ್ವವಿದ್ಯಾಲಯದ, ಕರ್ನಾಟಕ ಕಲಾ ಮಹಾವಿದ್ಯಾಲಯದಲ್ಲಿ ನಡೆಯುತ್ತಿರುವ  ಅಂತರ ಕಾಲೇಜು ಯುವಜನೋತ್ಸವದಲ್ಲಿ ಸ್ಟಾಫ್ ಬಿಲ್ಡಿಂಗ್‌ನಲ್ಲಿ ರಸಪ್ರಶ್ನೆ ನಡೆಯಿತು. ಈ ಸ್ಪರ್ಧೆಯಲ್ಲಿ ವಿವಿಧ ಕಾಲೇಜಿನ ಸ್ಪರ್ಧಾಳುಗಳು ಭಾಗವಹಿಸಿದ್ದರು. ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಏಳು ಕಾಲೇಜುಗಳಿಂದ ಪ್ರತಿಯೊಂದು ಕಾಲೇಜಿನಿಂದ ಮೂರು ವಿದ್ಯಾರ್ಥಿಗಳು ಭಾಗವಹಿಸಿದ್ದು. ಒಟ್ಟು 21 ವಿದ್ಯಾರ್ಥಿಗಳು ಭಾಗವಹಿಸಿದರು. ಕಾರ್ಯಕ್ರಮದ ನೇತೃತ್ವವನ್ನು ವಹಿಸಿಕೊಂಡಂತಹ, ಪ್ರೋ ಐ ಸಿ ಮುಳಗುಂದ , ಪ್ರೋ ಶ್ರೀಮತಿ ಇಂದಿರಾನಿ ಕಟ್ಟಿಯವರು ಸ್ಪರ್ಧೆಯ ನಿರ್ಣಾಯಕರಾಗಿದ್ದರು.

**ನಿಂಗಪ್ಪ ಎಂ**
**ಬಿ ಎ ದ್ವಿತೀಯ ವರ್ಷ**





## ವಿವಿಧ ಆಲಾಪಗಳಲ್ಲಿ  ಮುದನೀಡಿದ ಶಾಸ್ತ್ರೀಯ ಸಂಗೀತ......




ಕರ್ನಾಟಕ ಕಲಾ ಮಹಾವಿದ್ಯಾಲಯದ ಫ್ಯಾರೆನ್ ಮೆಮೊರಿಯಲ್ ಸಭಾಂಗಣದಲ್ಲಿ ಯುವಜನೋತ್ಸವದ ಅಂಗವಾಗಿ ಶಾಸ್ತ್ರೀಯ ಸಂಗೀತ ಕಾರ್ಯಕ್ರಮ ನಡೆಯಿತು. ಇಲ್ಲಿ ವಿದ್ಯಾರ್ಥಿಗಳು ಭೀಮ ಪಲಾಸ ರಾಗ, ಮಧುವಂತಿಕೆ ರಾಗ ಮತ್ತು ಪೂರ್ವಿರಾಗದಲ್ಲಿ ತಮ್ಮ ಸಂಗೀತದ ರಸದೌತಣವನ್ನು ವಿದ್ಯಾರ್ಥಿಗಳು ಪ್ರೇಕ್ಷಕರನ್ನು ರಂಜಿಸಿದರು. ಈ ಸ್ಪರ್ಧೆಗೆ ನಿರ್ಣಾಯಕರಾಗಿ ಪ್ರೊ ಶ್ರೀನಿವಾಸ ಜೋಶಿ, ವೇಂಕಟೇಶ ಪುಜಾರ, ಮತ್ತು ಶ್ರೀಮತಿ ಗಾಯತ್ರಿ ಜೋಶಿ ಆಗಮಿಸಿದ್ದರು.

**ಕನಕಲಕ್ಷ್ಮಿ,**
**ಬಿ.ಎ ಅಂತಿಮ ವರ್ಷ**

## ಜಲಮಾಲಿನ್ಯ ಬಿಂಬಿಸುವ ಚಿತ್ತಾರ.........

 ವಿ ಕೃ ಗೋಕಾಕ ಗ್ರಂಥಾಲಯದಲ್ಲಿ ಸ್ಥಳದಲ್ಲಿಯೆ ಚಿತ್ರ ಬಿಡಿಸುವುದು ಸ್ಪರ್ಧೆ ಜರುಗಿತು ಈ ಸ್ಪರ್ಧೆಯಲ್ಲಿ ನೀರು ಒಂದು ನಮ್ಮ ಸಂಪನ್ಮೂಲವಾಗಿದ್ದು ಅದನ್ನು ಕಾಪಾಡಿಕೊಂಡು ಯೋಗ್ಯರೀತಿಯಲ್ಲಿ ಬಳಸಿಕೊಂಡು ಹೊಗಬೇಕು ಎಂಬ ಸಂದೇಶವನ್ನು ಸ್ಪರ್ಧಾಳುಗಳು  ನೀರಿನ ಸಮಸ್ಯೆ ಮತ್ತು ಜಲ ಮಾಲಿನ್ಯ, ವಿಷಯದ ಬಗ್ಗೆ ಮನ ಮುಟ್ಟುವಂತೆ ಚಿತ್ರಿಸಿದ್ದಾರೆ.  ಇಲ್ಲಿ ಏಳು ಜನ ಸ್ಪರ್ಧಾಳುಗಳು ಭಾಗವಹಿಸಿದ್ದರು. ಈ ಸ್ಪರ್ಧೆಯಲ್ಲಿ ಸ್ಪರ್ಧಾಳುಗಳು ಆಕರ್ಷಕ ರೀತಿಯಲ್ಲಿ ತಮ್ಮ ಅಭಿಪ್ರಾಯವನ್ನು ಚಿತ್ರಗಳ ಮೂಲಕ ಅನಾವರಣ ಗೋಳಿಸಿದರು.

**ಲಕ್ಷ್ಮಿ ಮೊರಬ**
**ಬಿ.ಎ ಅಂತಿಮ ವರ್ಷ**



## "ಬಣ್ಣ ಬಣ್ಣದ ಚಿಟ್ಟೆಗಳ ರಾಶಿಯಂತೆ ಕೆಸಿಡಿ ವಾತಾವರಣ"

ಎಲ್ಲೆಲ್ಲೂ ಹಬ್ಬದ ವಾತಾವರಣ ಕೆಸಿಡಿಯ ಆವರಣದ ತುಂಬೆಲ್ಲಾ ಬಣ್ಣ ಬಣ್ಣದ ಹೂಗಳ ರಾಶಿಯಂತೆ ವಿವಿಧ ಕಾಲೇಜಿನ ಯವಕ ಯುವತಿಯರು ಬಣ್ಣದ ತೊಡುಗೆಯಲ್ಲಿ ಕೆಸಿಡಿ ಒಂದು ರಂಗು ರಂಗಿನ ಮಯ. ಅದ್ಭುತ ಸ್ವರ್ಗದ ಮಾಯಾ ಲೋಕದಂತೆ ಕಂಗೊಳಿಸುತ್ತಿದೆ. ವಿವಿಧ ಕಾಲೇಜಿನ ವಿದ್ಯಾರ್ಥಿ ವರ್ಗವನ್ನು ಸ್ವಾಗತಿಸುತ್ತಿರುವ ಕಾಲೇಜಿನ ಬ್ಯಾನರ್‌ಗಳು, ಒಳಗೆ ಆಗಮಿಸಿದರೆ ಸ್ವಾಗತ–ಕ್ಕೆ ಕುಳಿತ ಬಣ್ಣದ ರಂಗೋಲಿ ಚಿತ್ರಗಳು, ಹಸೆಮನೆಯ ತೊಟ್ಟಿಲಲ್ಲಿ ಶೃಂಗಾರಗೊಂಡ ಅರಮನೆಯಂತೆ ಕೆಸಿಡಿ ಇಂದು ಕಂಗೊಳಿಸುತಿತ್ತು. ಬಣ್ಣದ ಚಿಟ್ಟೆಗಳ ರಾಶಿಯ ಚಲನ ವಲನದಂತೆ ಅಡ್ಡಾಡುವ ಎಲ್ಲಾ ಶಿಕ್ಷಕ ಮತ್ತು ವಿದ್ಯಾರ್ಥಿ ವರ್ಗ ಸ್ಪರ್ಧೆಗಳು ಅಲ್ಲಿ ನಡೆಯುತ್ತಿವೆ, ಇಲ್ಲಿ ನಡೆಯುತ್ತಿವೆ ಎಂದು ಗೊಂದಲದಲ್ಲಿ ಜಟಾಪಟಿಗೆ ಬಿಳುತ್ತಿರುವ ಸ್ಪರ್ಧಾರ್ತಿಗಳು ಸೋಲು ಗೆಲುವಿನ ತವಕ ಗೆಲುವಿಗಾಗಿ ಒಬ್ಬರ ಮೇಲೊಬ್ಬರು ನಡೆಸುತ್ತಿರುವ ಪೈಪೋಟಿ ಅವರದೇ ಶೈಲಿಯ ಅಭಿನಯ ವ್ಯಕ್ತಪಡಿಸುವಿಕೆ ಹೀಗೆ ಕೆಸಿಡಿ ತನ್ನ ಯುವಜನೋತ್ಸವ ಹಬ್ಬವನ್ನು ಆಚರಿಸಿಕೊಳ್ಳಲು ಪ್ರಾರಂಭಿಸಿತು.

**ಸುನೀಲ. ಗದೆಪ್ಪಗೋಳ**

ಗೌರವ ಸಂಪಾದಕರು: ಡಾ. ಎಸ್.ಎಸ್.ಕಟ್ಟಿಮನಿ, ಸಂಚಿಕೆ ಸಂಪಾದಕರು: ಡಾ. ಪ್ರಭಾಕರ್ ಕಾಂಬಳೆ, ಡಾ.ಈಶ್ವರ್ ಗೌಡ ಪಾಟೀಲ್, ವಿದ್ಯಾರ್ಥಿ ಸಂಪಾದಕರು: ಸುನೀಲ, ಲಕ್ಷ್ಮೀ, ಕನಕ ಲಕ್ಷ್ಮಿ, ಶ್ರೀಹರಿ, ನಿತಿನ. ಶೆಟ್ಟಿ, ಕೆ.ಆರ್. ಚೈತ್ರಾ, ಗಿರಿಜಾ.ಬೆಳ್ಳಕ್ಕಿ, ರವಿ.ನಾಯ್ಕ್, ಪೂಜಾ.ಬಿ, ನಿಂಗಪ್ಪ.ಎಂ..